ಗೌರವ ಇಟ್ಟುಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಜನ ನಮ್ಮನ್ನು ತೆಗಳುತ್ತಾ ಇದ್ದಾರೆ. ಚಾಮರಾಜನಗರದಲ್ಲಿಯ ಪುಣಜೂರು ರಸ್ತೆ ತೀರಾ ಹದಗೆಟ್ಟಿದೆ. ಸರ್ಕಾರ ಸ್ಪಷ್ಟ ಭರವಸೆ ಕೊಡಬೇಕು. ಇಲ್ಲದಿದ್ದರೆ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ರವರು ಧರಣಿ ಕೂರಲು ಅಧ್ಯಕ್ಷರ ಪೀಠದ ಬಳಿಗೆ ಆಗಮಿಸಿದರು)

ಉಪಾಧ್ಯಕ್ಷರು: ಅಧಿವೇಶನದ ಕೊನೆಯ ದಿವಸ ನೀವು ಈ ರೀತಿ ಮಾಡಿದರೆ ಹೇಗೆ? ಮೊನ್ನೆಯ ದಿವಸ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವಾಗ ಈ ವಿಷಯವನ್ನು ಮಾತನಾಡಿದಿರಿ. 'ನಾನು ಸಂಬಂಧಪಟ್ಟವರಿಗೆ ಹೇಳಿದ್ದೇನೆ ಎಂದು' ಸಂಬಂಧಪಟ್ಟ ಸಚಿವರು ಉತ್ತರ ನೀಡಿದ್ದಾರೆ. ದಯಮಾಡಿ ಧರಣಿ ಕುಳಿತುಕೊಳ್ಳಬೇಡಿ. ತಮ್ಮ ಸ್ಥಾನಕ್ಕೆ ವಾಪಾಸ್ಸು ಹೋಗಿ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಉಪಾಧ್ಯಕ್ಷರೆ, ಇದು ನಾಗಾರ್ಜುನ ಕನ್ಸ್‌ಟ್ರಕ್ಷನ್ಸ್ ಕಾರ್ಪೋರೇಷನ್ನಿಗೆ ಗುತ್ತಿಗೆಗೆ ವಹಿಸಿದೆ. ಆ ಗುತ್ತಿಗೆದಾರರನ್ನು ಕರೆಸಿ ಈಗಾಗಲೇ ಮಾತನಾಡಿದ್ದೇನೆ. ನವೆಂಬರ್ ತಿಂಗಳ ಕೊನೆಯೊಳಗಾಗಿ ಬ್ಯಾಕ್‌ಲಾಗ್ ಇರುವ ಕೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತೇವೆಂದು ಹೇಳಿದ್ದಾರೆ. ಮಾರ್ಚ್ 1999ರೊಳಗೆ ಆ ಕೆಲಸವನ್ನು ಮುಗಿಸಿಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಸ್ಪಷ್ಟ ಭರವಸೆ ಕೊಡಬಯಸುತ್ತೇನೆ. ದಯವಿಟ್ಟು ಇದರ ಬಗ್ಗೆ ಯಾವುದೇ ಅನುಮಾನಪಟ್ಟಕೊಳ್ಳಬೇಕಾಗಿಲ್ಲ. ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ತಾವು ಹೇಳಿದ ಪ್ರಕಾರ ಎರಡು ಸಲ ಕರೆದು ಮೀಟಿಂಗ್ ಮಾಡಿ ತೀರ್ಮಾನ ತೆಗೆದುಕೊಂಡಿದ್ದೇವೆ.

(ಈ ಹಂತದಲ್ಲಿ ಶ್ರೀ ವಾಟಾಳ್‌ನಾಗರಾಜ್ ರವರು ಧರಣಿಯನ್ನು ವಾಪಸ್ಸು ತೆಗೆದುಕೊಂಡು ತಮ್ಮ ಸ್ವಸ್ಥಾನಕ್ಕೆ ಹಿಂತಿರುಗಿದರು).

(ಎ) ಫೋರೆಸ್ ಮತ್ತು ಬಿಪಿಎಲ್ ಕಾರ್ಮಿಕರ ಮುಷ್ಕರದ ಬಗ್ಗೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾರ್ಮಿಕ ಮಂತ್ರಿಗಳಾದಂಥ ಸಿದ್ದರಾಮಯ್ಯನವರಿಗೆ ಸಂಬಂಧಪಟ್ಟ ಒಂದು ಪ್ರಶ್ನೆ, ಮತ್ತು ಮಾನ್ಯ ಕೃಷಿ ಸಚಿವರಿಗೆ ಸಂಬಂಧಪಟ್ಟ ಇನ್ನೊಂದು ಪ್ರಶ್ನೆ ಹೀಗೆ ಎರಡು ವಿಷಯಗಳನ್ನು ಒಂದೇ ಸಲಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಪ್ರಜಾಪ್ರಭುತ್ವ ಎನ್ನುವುದಕ್ಕೆ ಏನಾದರೂ ಬೆಲೆ ಇದೆಯೇ ಅಥವಾ ಇಲ್ಲವೇ ಎನ್ನುವುದು ನನ್ನ ಮೊದಲನೇ ಪ್ರಶ್ನೆ. ಏಕೆಂದರೆ ಲಕ್ಷಾಂತರ ಕಾರ್ಮಿಕರು ಬೆಂಗಳೂರು ನಗರದಲ್ಲಿ